**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. :62 ಪ್ರಾ.ಸಾ. : 51**

ಸಾಕ್ಷಿಯ ಹೆಸರು : ಕರಿಯಮ್ಮ ಕನ್ನಾ ಮಡಿವಾಳ
ಗಂಡನ ಹೆಸರು : ಕನ್ನಾ ಮಡಿವಾಳ
ವಯಸ್ಸು : 70 ವರ್ಷ
ಉದ್ಯೋಗ : ಗೃಹಿಣಿ.
ವಾಸ : ಕಾನಗೋಡು.

**ದಿನಾಂಕಃ 05-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಕಾನಗೋಡು ಗ್ರಾಮದಲ್ಲಿ 30 ವರ್ಷಕ್ಕಿಂತ ಹೆಚ್ಚು ಕಾಲದಿಂದ ಅಲ್ಲಿ ಮದುವೆ ಆದಾಗಿನಿಂದ ವಾಸ ಇದ್ದೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ನನಗೆ ಇದೆ. ಕಾರಣ ಆರೋಪಿ ನನ್ನ ಊರಿನವರು ಆಗಿರುತ್ತಾನೆ. ಆರೋಪಿ ಕಾನಗೋಡು ಗ್ರಾಮ ಪಂಚಾಯತಿಯ ಅಧ್ಯಕ್ಷ ಆಗಿದ್ದ ವಿಚಾರ ನನಗೆ ಗೊತ್ತಿಲ್ಲ. 2001-02 ರಲ್ಲಿ ಸರ್ಕಾರ ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ ನಮ್ಮ ಗ್ರಾಮಕ್ಕೆ ಶೌಚಾಲಯ ನಿರ್ಮಿಸಿಕೊಳ್ಳಲು ರೂ.20 ಲಕ್ಷ ಅನುದಾನ ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ಅದರಲ್ಲಿ 210 ಫಲಾನುಭವಿಗಳು ಆಯ್ಕೆ ಆಗಿದ್ದರು ಮತ್ತು ಅದರಲ್ಲಿ ನನ್ನ ಹೆಸರು ಇತ್ತು ಮತ್ತು ಪ್ರತಿ ಫಲಾನುಭವಿಗಳಿಗೆ ರೂ.3000/- ಸಹಾಯಧನ ನೀಡಬೇಕಿತ್ತು ಎನ್ನುವದು ನನಗೆ ಗೊತ್ತಿಲ್ಲ. ನನಗೆ ರೂ.3000/- ಸಹಾಯಧನವನ್ನು ಗ್ರಾಮ ಪಂಚಾಯತಿಯಿಂದ ಕೊಟ್ಟಿಲ್ಲ. ಗ್ರಾಮ ಪಂಚಾಯತಿಯಿಂದ ಶೌಚಾಲಯವನ್ನು ನನ್ನ ಮನೆಗೆ ನಿರ್ಮಾಣ ಮಾಡಿಕೊಟ್ಟಿಲ್ಲ. ಇತ್ತೀಚೆಗೆ ನನ್ನ ಮನೆಗೆ ಶೌಚಾಲಯ ನಿರ್ಮಾಣ ಆಗಿದೆ. ಪೊಲೀಸನವರು ನನ್ನನ್ನು ಈ ಪ್ರಕರಣದಲ್ಲಿ ವಿಚಾರಣೆ ಮಾಡಿಲ್ಲ.

**ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದಃ-**

2. 2001-02 ರಲ್ಲಿ ಶೌಚಾಲಯ ನನಗೆ ಮಂಜೂರು ಆಗಿತ್ತು ಮತ್ತು ನಾನು ಅದನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಪಡೆದುಕೊಂಡಿದ್ದರೂ ಈಗ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ – ಇಲ್ಲ –</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ